# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2012-14
Date of Posting, Kodialbail post office
on 12th of every Month

ಸಂಪುಟ ೩ | ನೋಂದಣಿ ಸಂಖ್ಯೆ : KARBIL / 2005 / 16123 | ಅಕ್ಟೋಬರ್- 2014 | ಸಂಚಿಕೆ ೧೦


**ಶ್ರೀ ಸಭಾದ ಮುಂದಿನ ಕಾರ್ಯಕ್ರಮ : ತಾರೀಕು 09–11–2014ರಂದು 'ದೀಪಾವಳಿ' ಆಚರಣೆ**

# ಕೃಷ್ಣಾ ಎನಬಾರದೇ... ಶ್ರೀಕೃಷ್ಣಾ ಎನಬಾರದೇ




ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 07–09–2014ನೇ ಆದಿತ್ಯವಾರದಂದು ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಸಮಾಜ ಬಾಂಧವರೊಡಗೂಡಿ ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು. ಬೆಳಗ್ಗೆ 9–00 ಘಂಟೆಗೆ ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣದಿಂದ ಮೊದಲ್ಗೊಂಡು ಕಿರಿಯರಿಗೆ ಹಾಗೂ ಹಿರಿಯರಿಗೆ ಭಗವದ್ಗೀತೆ ಕಂಠಪಾಠ ಸ್ಪರ್ಧೆ ಆಯೋಜಿಸಲಾಗಿತ್ತು. 10 ವರ್ಷಕ್ಕಿಂತಲೂ ಕಡಿಮೆ ಪ್ರಾಯದ ಮಕ್ಕಳು ಸ್ಪಷ್ಟ ಹಾಗೂ ಸ್ಫುಟವಾಗಿ ಧ್ಯಾನಶ್ಲೋಕವನ್ನು ಪಠಿಸಿದ್ದು ಅತ್ಯಂತ ಸಂತೋಷಕರವಾದ ವಿಷಯ. ಸಮಾಜದ ಅನೇಕ ಹಿರಿಯರು ಕೂಡಾ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಆ ದಿನದ ಅತ್ಯಂತ ಮನಮೋಹಕ ಮತ್ತು ಆಕರ್ಷಣೀಯವಾದ ವಿಷಯ ಮುದ್ದುಕೃಷ್ಣವೇಷ ಸ್ಪರ್ಧೆ. ಬಹುಶಃ ಬಹುತೇಕ ಎಲ್ಲಾ ತಂದೆ ತಾಯಿಗಳಿಗೂ ತಮ್ಮ ಮಗುವನ್ನು ಮುದ್ದುಕೃಷ್ಣನಾಗಿ ಭಗವಂತನ ಅವತಾರದಲ್ಲಿ ಕಾಣಬೇಕೆಂಬ ಇಚ್ಛೆ

*(ಮೂರನೇ ಪುಟಕ್ಕೆ)*

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

**ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು**


ಸಮಾಜ ಬಾಂಧವರೇ,

**ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವರ್ಷಂಪ್ರತಿಯಂತೆ ಈ ಬಾರಿ ದಿನಾಂಕ 09–11–2014ನೇ ಆದಿತ್ಯವಾರದಂದು ಸಂಜೆ 5-00 ಗಂಟೆಗೆ**

## ☆☆ದೀಪಾವಳಿ ಆಚರಣೆಯನ್ನು ☆☆

ಸಾಂಪ್ರದಾಯಿಕ ಉಡುಗೆ ಸ್ಪರ್ಧೆ, ವಿನೋದಾತ್ಮಕ ಆಟಗಳು, ಮನೋರಂಜನಾ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು. ಆ ದಿನದ ಸುಗ್ರಾಸ ಭೋಜನದ ವ್ಯಂಜನಗಳನ್ನು ಆಸಕ್ತ ಸದಸ್ಯರು ಮನೆಯಿಂದಲೇ ತಯಾರಿಸಿ ತರುವುದು ವಾಡಿಕೆ. ಹಾಗಾಗಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ವಿನಂತಿಸುತ್ತೇವೆ. ವ್ಯಂಜನಗಳನ್ನು ತಯಾರಿಸಿ ತರುವವರು ಮುಂಚಿತವಾಗಿ ತಿಳಿಸಿ ಸಹಕರಿಸಿ. ಆ ದಿನದ ಇತರ ಖರ್ಚುಗಳನ್ನು ಧನಸಹಾಯದ ಮೂಲಕವೂ ಪ್ರಾಯೋಜಿಸಬಹುದು.

**ಅಧ್ಯಕ್ಷರು** ಮತ್ತು **ಸರ್ವ ಸದಸ್ಯರು**




*ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :*

**ಶ್ರೀಮತಿ ಅರುಣಾ ಸೋಮಶೇಖರ್**
**9880413243, 2452860** (ಮನೆ)
**ಶ್ರೀಮತಿ ಶೈಲಜಾ ಶ್ರೀಕಾಂತ್**
**9341446255, 2495929** (ಮನೆ)
**ಶ್ರೀ ವಿದ್ಯಾರಣ್ಯ ಕೆ. : 9686201277**

**ಸ್ವಾಮಿ ವಿವೇಕಾನಂದ ಉಲ್ಲೇಖ**

*"ವಿಧವೆಯರ ಕಣ್ಣೀರನ್ನು ಒರೆಸುವ ಅಥವಾ ಅನಾಥರ ಬಾಯಿಗೆ ಒಂದು ತುತ್ತು ಹಾಕುವ ತತ್ವವನ್ನು ಪ್ರತಿಪಾದಿಸದ ಧರ್ಮ ಮತ್ತು ದೇವರನ್ನು ನಾನು ನಂಬುವುದಿಲ್ಲ."*

**ಸ್ಥಾನಿಕ ಸಮಾಜದ ಅಪ್ರತಿಮ ಸಾಧಕಿ**

**ಪೂಜ್ಯ ಮಾತೃಶ್ರೀಯವರಿಗೆ**

**2ನೇ ವರ್ಷಾಂತಿಕದ**

**ನೆನಪಿನ ಕಾಣಿಕೆ**

**ಕರ್ವಾಲು ಶ್ರೀಮತಿ ವನಜಾಕ್ಷಿ ಅಮ್ಮ**

**(ದಿವಂಗತ ಕರ್ವಾಲು ಕೃಷ್ಣರಾಯರ ಪತ್ನಿ)**

**ಕರ್ವಾಲು, ನೀರೆಬೈಲೂರು, ಕಾರ್ಕಳ ತಾಲೂಕು**

ಜನನ : 1929 ● ನಿಧನ : 17-10-2012



**ಕಡುಬಡತನದ ಬೇಗೆಯಲ್ಲಿ ಗಂಧದ ಕೊರಡಿನಂತೆ ತಮ್ಮ ದೇಹವನ್ನು ತೇದು ಮಕ್ಕಳು, ಮೊಮ್ಮಕ್ಕಳನ್ನು ಸಾಕಿ ಸಲಹಿದ ಮಾತೆಗೆ ಪ್ರೀತಿಪೂರ್ವಕ ನಮನಗಳು.**

**ಶಂಕರನಾರಾಯಣ ರಾವ್ ಕರ್ವಾಲ್** (ಪುತ್ರ)
KNK CORP. PVT. LTD., BANGALORE
Mobile : 9449958151; Email : shankaranarayanarao@gmail.com
**ಸಂಧ್ಯಾ ಎಸ್. ರಾವ್** (ಸೊಸೆ) Landline : 080 - 23163431
**ಸುದರ್ಶನ ರಾವ್ ಕರ್ವಾಲ್** (ಮೊಮ್ಮಗ)
Commercial Pilot, Jet Airways, Bangalore; Mobile : 9880363622
**ಸಂಗೀತಾ ರಾವ್ ಕರ್ವಾಲ್** (ಮೊಮ್ಮಗಳು)
W/o. ವಿವೇಕ್ ಎಸ್. ರಾವ್ ಮೂಡುಶೆಡ್ಡೆ

Address : Flat No. D - 301, D - Block, ETA Garden Apartments
Near Binny Mills, Magadi Road, Bangalore - 560 023

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್ ಪುತ್ತೂರು**
ಮೊಬೈಲ್ : 9448481696

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಸ್ವಾತಿ ಪ್ರಮೋದ್ ಕ್ಯಾದಿಗೆ**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :
**ಸಿ. ಎಸ್. ರಾವ್, ಉಡುಪಿ**




## ಸ್ವಾಗತ ಸುಸ್ವಾಗತ ದೀಪಾವಳಿ

ಭಾರತಮಾತೆಯ ಮಡಿಲಲ್ಲಿ
ಸಂಭ್ರಮದ ಹಬ್ಬಗಳು ಸಾಲು ಸಾಲು
ಕಾರ್ತಿಕ ಮಾಸದ ಅಮಾವಾಸ್ಯೆಯಂದು
ದೀಪಾವಳಿ ಹಬ್ಬದ ಆಚರಣೆಯಲ್ಲಿ
ಧನ ಧಾನ್ಯ ವಿದ್ಯಾ ವಿಜಯ ಮೊದಲಾಗಿ
ಅಷ್ಟಲಕ್ಷ್ಮಿಯರ ಆರಾಧನೆ ಮನೆಮನೆಗಳಲ್ಲಿ

ಗಗನ ಮೇಘಗಳ ಶಾಂತತೆಯ ಮೌನದಲ್ಲಿ
ನದಿಕೆರೆ–ಕೊಳ್ಳ–ಸರೋವರ
ತುಂಬಿ ಹರಿಯುತಿರಲು
ಕಾಡು–ಮರ–ಬಳ್ಳಿ ಸಂತಸದಿ ಬೀಗುತಿರಲು
ಹಚ್ಚ ಹಸಿರಿನ ಪ್ರಕೃತಿ ಕಂಗೊಳಿಸುತಲ್ಲಿ
ಮಳೆಗಾಲ ಕಳೆದು ಬರುವ ಈ ದೊಡ್ಡ ಹಬ್ಬ
ಸ್ವಾಗತ ಸುಸ್ವಾಗತ ದೀಪಾವಳಿಗೆ

ಚಂದಿರನ ಬೆಳದಿಂಗಳ ಶೂನ್ಯದಲ್ಲಿ
ಮನೆಮುಂದೆ ಅಲಂಕರಿಸಿದ ಅಂಗಳದಲ್ಲಿ
ಹಿರಿಯ ಕಿರಿಯ
ಆಬಾಲವೃದ್ಧ ಸ್ತ್ರೀಯರ ಸಂಗಮದಲ್ಲಿ
ಸಾಲು ಸಾಲು ದೀಪಗಳ ಅಲಂಕಾರದಲ್ಲಿ
ತರತರದ ಸುಡುಮದ್ದಿನ ಆರ್ಭಟದ ಸೊಗಸಲ್ಲಿ
ಸಂಗೀತ ಗಂಗೆಯ ಗಂಗೋತ್ರಿಯಲ್ಲಿ
ಸಂತಸದ ಝೇಂಕಾರ ಮೊಳಗಿತಲ್ಲಿ

ಹಳ್ಳಿ ಹಳ್ಳಿಗಳಲ್ಲಿ – ಮನೆ ಮನೆಗಳಲ್ಲಿ
ವ್ಯಾಪಾರ ವ್ಯವಹಾರದ ತಾಣ ತಾಣಗಳಲ್ಲಿ
ದೀಪಾವಳಿಯ ಆಚರಣೆ
ಶ್ರದ್ಧಾಭಕ್ತಿ ಉಪಾಸನೆಯಲ್ಲಿ
ಏನೊಂದು ಉತ್ಸಾಹ ಏನೊಂದು ಸಂಭ್ರಮ
ಸ್ವಾಗತ ಸುಸ್ವಾಗತ ದೀಪಾವಳಿಗೆ

–***ಯು. ಎಸ್. ಸದಾಶಿವ ರಾವ್,*** ಮಂಗಳೂರು



**(ಬೀಡಿ ಸೇದುವವನನ್ನು ಆಕಸ್ಮಿಕವಾಗಿ ನೋಡಿ)**

ಯಾಕೆ ಸುಡತೀ ಸುಟ್ಕೋತಿ ತಮ್ಮ
ಬೀಡಿ ಸೇದಿ ಸೇದಿ
ಹೊಗೆ ಸುರುಳಿ ಸುರುಳಿ
ಸುತ್ಕೋಂಡ್ ಸುಟ್ಕೋಂಡ್ ಪಟ್ ಅಂತ
ಮುಗಿಸ್ ಬಿಡ್ತದಿ ನಿನ್ ಜೀವನ್ ಚಕ್ರಾನೆ.



ಸುರುಳಿ ಸುತ್ಕೊಂಡ್ ಅಮರಿಕೊಂಡ್
ಗಬರಿ ಕೊಳ್ತದೆ ನಿನ್ ಉಸುರ್ ಚೀಲಾನ
ದಮ್ಮೆಲ್ಲಾ ಹೋಗ್‌ಬುಟ್ಟು ಕೆಮ್ಮೆಲ್ಲಾ ಬರುಸ್‌ಬುಟ್ಟು
ಹಮ್ಮೆಲ್ಲಾ ಇಳುಸ್ ಬುಡ್ತದೆ.

ಬೀಡಿ ಸಿಗರೇಟ್‌ನಾಗೆ ಅದೆ ತಂಬಾಕು
ಹಾಕ್ತಾವೆ ನಿನ್ ಚೀಲಕ್ಕೇ ಏಟು
ಇದೆ ಅಣ್ಣಾ ಅದರಾಗೆ ಬಾಕು
ಏಳದಿದ್ರೆ ಬರ್ತಾವೆ ಬೇಕು ಸೀಕು



ಸಿಟ್ ಬಂದ್ರೆ ಸುಡ್ಲಾ ಪದ್ಧತಿಗೋಳ
ಯಾಕ್ ಸುಟ್‌ಕೋತಿ ನಿನ್ ನೀನಾ
ಅದಾರ್ ಹಜಾರ್ ಜನ ಹಜಾರದಾಗ
ನಿನ್‌ಕಿಂತ ಕೆಳಗೆ
ಕಲೀಬೇಕು ಅವರಿಂದ ಹಾಡೋದ್ ಸುವ್ವಾಲೇನ

ಸೇರಿಸ್‌ಬೇಡ ಕರಿ ಕಲ್‌ಮಷನಾ
ಹೋಗ್ ಸೇರ್ಕೊಂಡ್ರೆ ಹೊಟ್ಟ್ಯಾಗೆ ಮೋಡ್ದಾಗೆ
ಬರ್‌ತಾವೆ ರೋಗ ಮದ್ದಿಲ್ಲ ಅದಕೆ
ಹೊಸಹುಟ್ಟು ಶುರು ಮಾಡ್ಲಾ
ಶ್ರುತಿಜತಿ ಮಧುರ ಗಾನಪಾನ



– ***ಎಮ್. ಆರ್. ವಾಸುದೇವ,*** ಮಂಗಳೂರು



## ತೊರೆದು ಜೀವಿಸಬಹುದೇ

ತೊರೆದು ಜೀವಿಸಬಹುದೇ
ಹಿಂದಿನ ಪರಂಪರೆ
ಕೂಡಿ ಬಾಳೋದೇ ಸಂಸ್ಕಾರವೆಂದು
ನಂಬಿದ್ದೆವು ನಾವು
ಆಗ ಚೆಂಡೆ ಶಬ್ದಕ್ಕೆ ಕಾಲಾಡುತ್ತಿದ್ದರು
ಈಗ ಅದೇ ಶಬ್ದಕ್ಕೆ ಕಾಲ್‌ಗಿತ್ತರು
ಪಂಥ ಹಾಕಿ ತಿನ್ನುತ್ತಿದ್ದರು ಹೋಳಿಗೆ ಪಾಯಸ
ಈಗ ನೆಕ್ಕಿ ನೆಕ್ಕಿ ತಿನ್ನುತ್ತಾರೆ ಬರ್ಗರ್ ಪಿಜ್ಜಾ
ಮದುವೆ ಮನೆಯಲ್ಲಿದ್ದು ಉಂಡೆವು
ಒಂದು ವಾರದ ಊಟ
ಈಗ ಬಫೆಯಲ್ಲಿ ಉಂಡೋಡಿದೆವು
ಅರ್ಧ ತಾಸಿನ ಊಟ
ಹಿಂದೆ ದೂರ ಸಂಪರ್ಕಗಳು
ದೂರಾ... ದೂರಾ...
ಈಗ ಅದೇ ದೂರ ಸಂಪರ್ಕಗಳಿಂದ
ದೂರ ದೂರಾಗಿದೆ ಸಂಬಂಧಗಳು
ಆದರೆ,
ಈಗಲೂ ಬದಲಾಗಿಲ್ಲ ಒಂದು!
ಮನ–ಮನೆಗಳ
ಪಿಸು... ಪಿಸು... ಗುಸುಗುಸುಗಳು
ಪಸರಿಸುವಂತೆ...



–***ಸ್ವಾತಿ ಪ್ರಮೋದ್,*** ಕ್ಯಾದಿಗೆ

## ಡಾ. ಶಾಶ್ವತ್ ಸತ್ಯನಾಥರಿಗೆ ವೈದ್ಯಕೀಯ ಪ್ರಶಸ್ತಿ

ಸೆಪ್ಟಂಬರ್ ತಿಂಗಳ 6ನೇ ಮತ್ತು 7ನೇ ತಾರೀಕುಗಳಲ್ಲಿ ಉಡುಪಿಯಲ್ಲಿ ನಡೆದ ಕರ್ನಾಟಕ ರಾಜ್ಯಮಟ್ಟದ ಮನೋರೋಗ ಚಿಕಿತ್ಸಾ ವಿಭಾಗದ ವೈದ್ಯರುಗಳ 24ನೇ ವಾರ್ಷಿಕ ಸಮಾವೇಶದಲ್ಲಿ (KANCIPS-2014) ಡಾ. ಶಾಶ್ವತ್ ಸತ್ಯನಾಥರು ಮಂಡಿಸಿದ "ಎಟ್ಟಿಟ್ಯೂಡ್ ಟುವರ್ಡ್ಸ್ ಮೆಂಟಲ್ ಇಲ್ನೆಸ್ ಎಮಂಗ್ ಮೆಡಿಕಲ್ ಫೆಕಲ್ಟಿ ಎಂಡ್ ಪೋಸ್ಟ್‌ಗ್ರಾಜ್ಯುವೇಟ್ಸ್ ಇನ್ ಎ ಮೆಡಿಕಲ್ ಕಾಲೇಜ್" ಎಂಬ ವಿಷಯಕ್ಕೆ "ಬೆಸ್ಟ್ ಪ್ರೆಸೆಂಟೇಶನ್ ಎವಾರ್ಡ್ ಲಭಿಸಿದೆ. ಮಂಗಳೂರಿನ ಯೇನೆಪೋಯ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಅಂತಿಮ ವರ್ಷದ ಯಂ.ಡಿ. ಸೈಕ್ಯಾಟ್ರಿ ಮಾಡುತ್ತಿರುವ ಇವರು ತಮ್ಮ ಎಂ.ಬಿ.ಬಿ.ಯಸ್.ನ್ನು ಎ. ಜೆ. ಶೆಟ್ಟಿ ಮೆಡಿಕಲ್ ಕಾಲೇಜಿನಲ್ಲಿ ಮಾಡಿದ್ದರು.

ಕಾಸರಗೋಡು ಶಿವಬ್ರಾಹ್ಮಣ ಸಭಾದ ಅಧ್ಯಕ್ಷ ಡಾ. ಸತ್ಯನಾಥ (ಕಲ್‌ನಾಡು ನರ್ಸಿಂಗ್ ಹೋಂ) ಮತ್ತು ಡಾ. ಗೀತರ ಸುಪುತ್ರರಾಗಿದ್ದಾರೆ.



## ಶ್ರೀ ಸಭಾದಲ್ಲಿ ನಡೆದ "ನಾಡ ಹಬ್ಬ"ದ ಸ್ಪರ್ಧಾ ವಿಜೇತರು

1. **ಭಗವದ್ಗೀತೆ ಸ್ಪರ್ಧೆ**
   ("ಶ್ರೀ ಕೃಷ್ಣಾಷ್ಟಮಿ ಆಚರಣೆ" ಸ್ಪರ್ಧಾ ವಿಜೇತರು)
   **(10 ವರ್ಷಕ್ಕಿಂತ ಕೆಳಗೆ)** I. ಶ್ರುತಿ
   **(10ರಿಂದ 16 ವರ್ಷ)**
   I. ವೈಭವಲಕ್ಷ್ಮಿ II. ಸಮನ್ವಿತಾ
   **(16 ವರ್ಷಕ್ಕಿಂತ ಮೇಲೆ)**
   I. ಸೌಂದರ್ಯಲಕ್ಷ್ಮಿ ಮತ್ತು ಅಪೇಕ್ಷಾ
   II. ಐಶ್ವರ್ಯಲಕ್ಷ್ಮಿ ಮತ್ತು ಹರಿನಾರಾಯಣ ರಾವ್
   III. ಪುಷ್ಪಾವತಿ
2. **ಕೃಷ್ಣವೇಷ ಸ್ಪರ್ಧೆ (3 ವರ್ಷದ ಕೆಳಗಿನ ವಿಭಾಗ)**
   I. ಶ್ರೇಷ್ಠಾ ರಾವ್ II. ಹಾರ್ದಿಕ್ III. ವಂಶ್
   **(3ರಿಂದ 8 ವರ್ಷದ ವಿಭಾಗ)**
   I. ಗೌರವ್ II. ಶರಣ್ಯ III. ಯಶಿಕಾ
3. **ಭಕ್ತಿಗೀತೆ**
   **(16ರಿಂದ 35 ವರ್ಷದ ವಿಭಾಗ)**
   I. ಅಪೇಕ್ಷಾ II. ಚಂದ್ರಿಕಾ
   III. ಸೌಂದರ್ಯಲಕ್ಷ್ಮಿ
   **(35 ವರ್ಷಕ್ಕಿಂತ ಮೇಲಿನ ವಿಭಾಗ)**
   I. ಸುಶೀಲ ರಾವ್ ಮತ್ತು ಬೃಂದ ಜೋಶಿ
   II. ರಾಜೇಂದ್ರ ಮೇರ್ಟ
   III. ಹರಿನಾರಾಯಣ ರಾವ್
4. **ಮಡಕೆ ಒಡೆಯುವ ಸ್ಪರ್ಧೆ**
   **(ಸೀನಿಯರ್) :** ಪ್ರದೀಪ್ ರಾವ್
   **(ಜೂನಿಯರ್) :** ಕಾರ್ತಿಕ್ ಮೇರ್ಟ
5. **ಚಕ್ಕುಲಿ ಊಹನಾ ಸ್ಪರ್ಧೆ**
   I. ಪುಷ್ಪಾವತಿ II. ಜನಕ ರಾಜ್

ಅಶ್ವಿನ್ – ಇವರಿಗೆ ಸದಾಶಿವ ಶಾಸ್ತ್ರಿಯವರಿಂದ ಪ್ರೋತ್ಸಾಹ ಬಹುಮಾನ

*(ಒಂದನೇ ಪುಟದಿಂದ)*

ಉತ್ಕೃಷ್ಟವಾಗಿರುತ್ತದೆ. ಅಂತೆಯೇ 8 ತಿಂಗಳ ಮಗುವಿನಿಂದ 12 ವರ್ಷದ ಮಕ್ಕಳ ಕೃಷ್ಣವೇಷ ಸ್ಪರ್ಧೆ ಸಮಾಜ ಬಾಂಧವರ ಕಣ್ ಮನ ತಣಿಸಿತು. ಯಕ್ಷಗಾನದಲ್ಲಿ ಹೇಳುವಂತೆ ನೆತ್ತಿಯಲ್ಲಿ ಜುಟ್ಟು, ಹಣೆಯಲ್ಲಿ ತಿಲಕದ ಬೊಟ್ಟು ಕೊರಳಲ್ಲಿ ಮುತ್ತಿನ ಹಾರ, ಉಟ್ಟಿದ್ದು ಪೀತಾಂಬರ, ಕೈಯಲ್ಲಿ ಕೊಳಲಿನ ನಾದ, ಕಾಲಿನಲ್ಲಿ ರಿಂಗಣಿಸುವ ಗೆಜ್ಜೆಯ ನಿನಾದ ಅಂಬೆಗಾಲಿಕ್ಕಿ ಬಂದ ಮುದ್ದುಕೃಷ್ಣ, ಕಿಶೋರ ಕೃಷ್ಣ, ರಾಧಾಕೃಷ್ಣ, ಯಶೋಧೆ ಕೃಷ್ಣ ಹೀಗೆ ಹತ್ತು ಹಲವಾರು ಭಗವಂತನ ಅವತಾರಗಳೇ ಮೇಳೈಸಿದ್ದವು. ಇದಾದ ನಂತರ ಭಕ್ತಿಗೀತೆಯ ಸ್ಪರ್ಧೆ ನಡೆಯಿತು. ದಾಸವರೇಣ್ಯರಿಂದ ರಚಿತವಾದ ಹರಿನಾಮ ಸಂಕೀರ್ತನೆಯು ಭಕ್ತಿಭಾವದಿಂದ ಕೂಡಿದ್ದು ಕೇಳುಗರಿಗೆ ಕರ್ಣಾನಂದ ವಾಯಿತು. ಈ ನಡುವೆ ಮಡಕೆ ಒಡೆಯುವ ಸ್ಪರ್ಧೆಯನ್ನು ಶ್ರೀ ಸಭಾದ ಹೊರಾಂಗಣದಲ್ಲಿ ಏರ್ಪಡಿಸಿದ್ದು ಉತ್ಸಾಹಿ ತರುಣರು ಅನೇಕ ಸಂಖ್ಯೆಯಲ್ಲಿ ಸ್ಪರ್ಧಿಸಿದರು. ಭೋಜನದ ನಂತರ ಶ್ರೀಮತಿ ಕ್ಷಮಾ ಹರಿನಾರಾಯಣ ರಾವ್‌ರವರ ಪ್ರಾರ್ಥನೆಯ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭಗೊಂಡಿತು. ಶ್ರೀಯುತ ಸುರೇಶ್ ರಾವ್ ಕಡಬರವರು ಭಗವಾನ್ ಶ್ರೀ ಕೃಷ್ಣನ ಬಗ್ಗೆ ರಸಪ್ರಶ್ನೆಯನ್ನು ನಡೆಸಿಕೊಟ್ಟರು. ಅವರೊಂದಿಗೆ ಶ್ರೀ ಸೋಮಶೇಖರ್ ಸಹಕರಿಸಿದರು. ಶ್ರೀಯುತ ಸದಾಶಿವ ಶಾಸ್ತ್ರಿಯವರು ತಾವು ಕಂಡು ಕೇಳಿದ ಅನೇಕ ವಿಷಯಗಳನ್ನು ಹಾಸ್ಯಭರಿತ ಮಾತುಗಳಿಂದ ವರ್ಣಿಸಿ ಪ್ರೇಕ್ಷಕರ ಮನಸೂರೆಗೊಂಡರು. ಬಳಿಕ ಸಮಾಜದ ಉದಯೋನ್ಮುಖ ಪ್ರತಿಭೆಗಳಿಂದ ಹಲವು ಪ್ರಕಾರಗಳ ನೃತ್ಯಗಳು ವಿಜೃಂಭಿಸಿದವು. ಸುಬ್ರಹ್ಮಣ್ಯ ಸಭಾದ ಮಹಿಳಾ ವಿಭಾಗ, ಮಕ್ಕಳ ವಿಭಾಗ, ಪುರುಷರ ವಿಭಾಗದಲ್ಲಿ ಸುಮಾರು 45 ನಿಮಿಷಗಳ ಕಾಲ ಅಮೋಘ ನೃತ್ಯವನ್ನು ಪ್ರದರ್ಶಿಸಿದರು. ಸಮೂಹ ನೃತ್ಯಗಳನ್ನು ಶ್ರೀಮತಿ ಅನುರಾಧಾ ಕಿಶೋರ್ ರಾವ್‌ರವರು ಸಂಯೋಜಿಸಿ ನಿರ್ದೇಶಿಸಿದ್ದರು.

ಈ ರೀತಿಯ ಧಾರ್ಮಿಕ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಭಗವದ್ಗೀತೆ ಕಂಠಪಾಠ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೆ ಬಿ.ಕೆ. ಮಾಧವ ರಾವ್ ಪ್ರತಿಷ್ಠಾನದಿಂದ ಹಾಗೂ ಮುದ್ದುಕೃಷ್ಣ ವೇಷ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಪುಟಾಣಿಗಳಿಗೆ ಶ್ರೀಯುತ ಸದಾಶಿವ ಶಾಸ್ತ್ರಿಯವರು ನಗದು ಹಾಗೂ ಫಲಕಗಳನ್ನು ಬಹುಮಾನ ರೂಪವಾಗಿ ಕೊಟ್ಟರು.

ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿದ ವಿಜೇತ ರಾವ್‌ರವರಿಗೆ ಬಹುಮಾನ ವಿತರಣೆ ಯನ್ನು ಮಾಡಲಾಯಿತು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಯುತ ನಾಗರಾಜ್ ವರ್ಕಾಡಿಯವರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಈ ಎಲ್ಲಾ ಕಾರ್ಯಕ್ರಮಗಳಿಗೆ ಯುವ ವೇದಿಕೆಯ ಅಧ್ಯಕ್ಷರಾದಂತಹ ಶ್ರೀಯುತ ವಿದ್ಯಾರಣ್ಯ ರಾವ್ ಮತ್ತು ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಅರುಣಾ ಸೋಮಶೇಖರ್ ಹಾಗೂ ಶ್ರೀಮತಿ ಕುಸುಮಾ ನವೀನ್ ರಾವ್ ಸಹಕರಿಸಿದರು.


## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.)

**ಶ್ರೀ ಸುಬ್ರಹ್ಮಣ್ಯ ಸಭಾಭವನ, ಬಿಜೈ ರಸ್ತೆ, ಮಂಗಳೂರು**

ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.), ಮಂಗಳೂರು, ಇದರ 4ನೇ ಶಾಖೆಯು ದಿನಾಂಕ 20–08–2014ರಂದು ಸುರತ್ಕಲ್ ಮುಖ್ಯ ರಸ್ತೆಯಲ್ಲಿರುವ ಪೂವ ಆರ್ಕೇಡ್‌ನ ಮೊದಲ ಮಹಡಿಯಲ್ಲಿ ಪ್ರಾರಂಭವಾಗಿರುತ್ತದೆ ಎಂದು ತಿಳಿಸಲು ಹರ್ಷಪಡುತ್ತೇವೆ.

ಈ ಶಾಖೆಯಲ್ಲಿಯೂ, ಸದಸ್ಯರ ಅನುಕೂಲತೆಗಾಗಿ ಎಲ್ಲಾ ವಿಧದ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಇದರ ಸಂಪೂರ್ಣ ಲಾಭವನ್ನು ಎಲ್ಲರೂ ಮುಖ್ಯವಾಗಿ ಸುರತ್ಕಲ್ ಪರಿಸರದಲ್ಲಿರುವ ನಮ್ಮ ಸಮಾಜ ಬಾಂಧವರು ಪಡೆದುಕೊಳ್ಳಬೇಕಾಗಿ ವಿನಂತಿಸುತ್ತೇವೆ.

ಸಂಘದ ಸದಸ್ಯರ ಮತ್ತು ಗ್ರಾಹಕರ ಸಂಪೂರ್ಣ ಸಹಕಾರದಿಂದ ಈ ಕಳೆದ ಆರ್ಥಿಕ ವರ್ಷದಲ್ಲಿ (2013–14) ನಾವು ರೂ. 17 ಕೋಟಿಯ ದಾಖಲೆ ಠೇವಣಿಯನ್ನು ಸಂಗ್ರಹಿಸಿದ್ದೇವೆ. ಹಾಗೆಯೇ ರೂ. 20 ಲಕ್ಷ ನಿವ್ವಳ ಲಾಭವನ್ನೂ ಗಳಿಸಿದ್ದೇವೆ ಎಂದು ತಿಳಿಸಲು ಹೆಮ್ಮೆಪಡುತ್ತೇವೆ.

ಈ ಸಾಂಪತ್ತಿಕ ವರ್ಷದಲ್ಲಿ ಎಲ್ಲಾ ಶೇರುದಾರರಿಗೆ ಶೇಕಡಾ 13 ಲಾಭಾಂಶ ವನ್ನು ಹಂಚಲಾಗಿದ್ದು, ಹಿಂದಿನ ವರ್ಷದಲ್ಲಿ ಕೊಟ್ಟ ಲಾಭಾಂಶಕ್ಕಿಂತ ಇದು ಶೇಕಡಾ ಒಂದರಷ್ಟು ಜಾಸ್ತಿಯಾಗಿರುತ್ತದೆ.

ನಿಮ್ಮೆಲ್ಲರ ಸಹಕಾರದ ಭರವಸೆಯೊಂದಿಗೆ, 2014–15ನೇ ಸಾಲಿಗೆ ರೂ. 27 ಕೋಟಿ ಠೇವಣಿಯನ್ನು ಸಂಗ್ರಹಿಸುವ ಗುರಿಯನ್ನು ಹಾಕಿಕೊಂಡಿದ್ದು, ರೂ. 30 ಲಕ್ಷ ನಿವ್ವಳ ಲಾಭದ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇವೆ.

ಸಂಘದ ಸರ್ವತೋಮುಖ ಅಭಿವೃದ್ಧಿಯಲ್ಲಿ ನಿಮ್ಮೆಲ್ಲರ ತುಂಬುಹೃದಯದ ಸಹಕಾರವನ್ನು ಬಯಸುವ–

**ಕರುಣ್ ರಾವ್ ಬೆಳ್ಳೆ**
ಅಧ್ಯಕ್ಷರು

ಮತ್ತು **ಆಡಳಿತ ಮಂಡಳಿ ಸದಸ್ಯರು**




## ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು
## ಋಕ್ ಸಂಹಿತಾ ಯಾಗ ಸಮಿತಿ, ಪಡುಬಿದ್ರಿ

# ವಿಜ್ಞಾಪನೆ

ಮಾನ್ಯರೇ,

ಸಮಸ್ತ ಸಮಾಜ ಬಾಂಧವರ ಶ್ರೇಯೋಭಿವೃದ್ಧಿಯ ಸಂಕಲ್ಪದಲ್ಲಿ
ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ ಉದಯಾದ್ರಿ ಮಠ
ಪಡುಬಿದ್ರಿಯಲ್ಲಿ ಕಾರ್ತಿಕ ಶುದ್ಧ ತೃತೀಯ
**ದಿನಾಂಕ 26–10–2014 ಆದಿತ್ಯವಾರದಿಂದ**
**ದಿನಾಂಕ 02–11–2014 ಆದಿತ್ಯವಾರ**
ದಶಮಿ ಪರ್ಯಂತ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ



# ಋಕ್ ಸಂಹಿತಾ ಮಹಾಯಾಗ

ಮತ್ತು
**ದಿನಾಂಕ 26–10–2014ರಂದು ಶ್ರೀ ಕೋದಂಡಾಶ್ರಮ ಹೆಬ್ಬೂರಿನ**
**ಪರಮಪೂಜ್ಯ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳವರ ದಿವ್ಯ ಉಪಸ್ಥಿತಿಯಲ್ಲಿ**

# ವೈದಿಕ ಸಮಾವೇಶ

ಹಾಗೂ **02–11–2014ರಂದು**
**ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ತೋಟಕಾಚಾರ್ಯ ಮಹಾಸಂಸ್ಥಾನಂ**
**ಎಡನೀರು ಮಠ ಶ್ರೀ ಶ್ರೀ ಕೇಶವಾನಂದ ಭಾರತೀ ಸ್ವಾಮಿಗಳವರ**
ದಿವ್ಯ ಉಪಸ್ಥಿತಿಯಲ್ಲಿ **ಋಕ್ ಸಂಹಿತಾ ಮಹಾಯಾಗ ಪೂರ್ಣಾಹುತಿ**
ನೆರವೇರಲಿದೆ.

ತದಂಗವಾಗಿ ಶ್ರೀ ಮಹಾಗಣಪತಿ ಹೋಮ, ಪಂಚಾಯತನ ದೇವತೆಗಳ
ಸಂಬಂಧಿ ಹೋಮ, ಬ್ರಾಹ್ಮಣ ಸುವಾಸಿನಿ ಆರಾಧನೆ,
ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ,
ಲಲಿತಾ, ವಿಷ್ಣು ಸಹಸ್ರನಾಮ ಪಾರಾಯಣ, ಭಜನೆ, ಅಷ್ಟಾವಧಾನಸೇವೆ,
ಮಹಾಪೂಜೆ ಧಾರ್ಮಿಕ–ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ
ನಿತ್ಯ ಅನ್ನಸಂತರ್ಪಣೆ ಜರಗಲಿದೆ.
ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ
ಭಾಗವಹಿಸಿ ತನು–ಮನ–ಧನ ಸಹಕಾರವನ್ನು ನೀಡಬೇಕಾಗಿ ವಿನಂತಿ.
ಅದೇ ದಿನ **ಸ್ಥಾನಿಕ ಬ್ರಾಹ್ಮಣ ಸಮಾವೇಶ**ವು ಜರಗಲಿದೆ.

ಸ್ವಾಗತಿಸುವ–

**ಶ್ರೀ ಎನ್. ಕೆ. ಜಗನ್ನಿವಾಸ ರಾವ್**
ಕಾರ್ಯದರ್ಶಿ

**ಶ್ರೀ ಎಮ್. ಆರ್. ವಾಸುದೇವ**
ಅಧ್ಯಕ್ಷರು

**ಡಾ. ವೈ. ಸುದರ್ಶನ ರಾವ್**
ಜೊತೆ ಕಾರ್ಯದರ್ಶಿ

**ಶ್ರೀ ಉಮೇಶ್ ಶ್ಯಾನುಭೋಗ್**
ಉಪಾಧ್ಯಕ್ಷರು

ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು ಇದರ
**ಸರ್ವ ಸದಸ್ಯರು** ಹಾಗೂ **ಋಕ್ ಸಂಹಿತಾ ಯಾಗದ ಅಧ್ಯಕ್ಷರು**
ಮತ್ತು **ಸರ್ವ ಸದಸ್ಯರು**

**ಆ ಪ್ರಯುಕ್ತ**

# ಬೃಹತ್ ವಧು–ವರರ ಸಮಾವೇಶ



ತಾ. **02–10–2014** ನಡೆಯಲಿದೆ.

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :***

**ಶ್ರೀ ಚೇತನ್ ಶರ್ಮ** ✆ : 9844187083 ಮತ್ತು
**ಶ್ರೀ ಶಶಿಕಾಂತ್ ರಾವ್** ✆ : 9341988753





# ವ್ಯಕ್ತಿತ್ವ ವಿಕಸನ ಹಾಗೂ ಉದ್ಯೋಗ ಮಾಹಿತಿ ಶಿಬಿರ

"ಉದ್ಯೋಗಂ ಪುರುಷ ಲಕ್ಷಣಂ" ಎಂಬುದು ಹಳೆಯ ಮಾತು. ಇಂದಿನ ಆಧುನಿಕ ಜಗತ್ತಿನಲ್ಲಿ ಉದ್ಯೋಗ ಎಂಬುದು ಲಿಂಗ ಬೇಧವಿಲ್ಲದೆ ಎಲ್ಲರ ಅಗತ್ಯವಾಗಿದೆ. ಸ್ಪರ್ಧಾತ್ಮಕ ಯುಗದಲ್ಲಿ ಉತ್ತಮ ಉದ್ಯೋಗ ಹಲವರಿಗೆ ಕನಸಾಗಿಯೇ ಉಳಿದರೆ ಇನ್ನುಳಿದವರು ನಿರ್ದಿಷ್ಟ ಗುರಿಯಿಟ್ಟುಕೊಂಡು ಸದೃಢ ನಿರ್ಧಾರದೊಂದಿಗೆ ಶ್ರಮಪಟ್ಟು ತಮ್ಮ ಉತ್ತಮ ಉದ್ಯೋಗದ ಕನಸನ್ನು ನನಸಾಗಿಸಿಕೊಳ್ಳುತ್ತಾರೆ. ಅಂಥವರಿಗಾಗಿ ಜ್ಞಾನಶಕ್ತಿ ಟ್ರಸ್ಟ್‌ನ ಉದ್ಯೋಗ ಸಮಿತಿಯು ಸೆಪ್ಟೆಂಬರ್ 14ರಂದು ವ್ಯಕ್ತಿತ್ವ ವಿಕಸನ ಹಾಗೂ ಉದ್ಯೋಗ ಮಾಹಿತಿ ಬಗ್ಗೆ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿತ್ತು. ಬೆಂಗಳೂರು, ಮಂಗಳೂರು, ಸುಳ್ಯ, ಕಡಬ ಹಾಗೂ ಪುತ್ತೂರು ಮುಂತಾದ ಕಡೆಗಳಿಂದ ಬಂದಿದ್ದ ಸುಮಾರು 24 ಶಿಬಿರಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆದರು. ಆರಂಭದಲ್ಲಿ ಶ್ರೀಮತಿ ಸರಿತಾ ಸಂತೋಷ್‌ರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ನಮ್ಮ ಸಮಾಜದ ಗಣ್ಯರಾದ ಶ್ರೀ ಎಮ್. ಎಸ್. ರಾಧಾಕೃಷ್ಣ ರಾವ್ ಇವರು ಜ್ಯೋತಿ ಬೆಳಗಿಸುವುದರೊಂದಿಗೆ ಕಾರ್ಯಕ್ರಮ ಉದ್ಘಾಟಿಸಿ ಉದ್ಯೋಗ ಸಮಿತಿಯ ಚಟುವಟಿಕೆಗಳನ್ನು ಶ್ಲಾಘಿಸಿ ಈ ರೀತಿಯ ಅಪರೂಪದ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಲು ಕರೆ ನೀಡಿ ಕಾರ್ಯಕ್ರಮಕ್ಕೆ ಶುಭಹಾರೈಸಿದರು. ಸಂಘದ ಉಪಾಧ್ಯಕ್ಷ ಶ್ರೀ ಭಾಗ್ಯಚಂದ್ರ ರಾವ್ (ಬಿ.ಸಿ. ರಾವ್) ಹಾಗೂ ಕಾರ್ಯದರ್ಶಿ ಕೆ. ಕೃಷ್ಣಾನಂದ ಉಪಸ್ಥಿತರಿದ್ದರು. ಅನಂತರ ನಡೆದ "ವ್ಯಕ್ತಿತ್ವ ವಿಕಸನ ಹಾಗೂ ಸಂದರ್ಶನಗಳಲ್ಲಿ ಯಶಸ್ವಿಯಾಗುವ" ಬಗ್ಗೆ ವೃತ್ತಿಪರ ತರಬೇತಿ ಸಂಸ್ಥೆಯಾದ "ಭೊಧೀಯೇಬಲ್" ತಂಡದ ಶ್ರೀ ಪ್ರಶಾಂತ ರಾವ್, ಶ್ರೀಮತಿ ದೀಪ್ತಿ ಪ್ರಶಾಂತ್ ರಾವ್ ಹಾಗೂ ಶ್ರೀ ಸೀಮಾ ಅವರು ಬಹು ಪರಿಣಾಮಕಾರಿಯಾಗಿ ಸವಿವರವಾಗಿ ಚಟುವಟಿಕೆಗಳ ಮೂಲಕ ನಡೆಸಿಕೊಟ್ಟರು. ಕಾರ್ಪೋರೇಟ್ ಪ್ರಪಂಚ, ಯಶಸ್ಸಿನ ಗುಟ್ಟುಗಳು, ಸಂವಹನಕಲೆ, ಸಂದರ್ಶನಗಳನ್ನು ಎದುರಿಸುವ ಬಗೆ ಮುಂತಾದ ವಿಷಯಗಳನ್ನು ಮನಮುಟ್ಟುವ ರೀತಿಯಾಗಿ ಶಿಬಿರಾರ್ಥಿಗಳಿಗೆ ತರಬೇತಿ ನೀಡಲಾಯಿತು. ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ ಅಭ್ಯರ್ಥಿಗಳು ಕಲಿಕೆಯ ಹೊಸ ಅನುಭವ ಪಡೆದರು. ಕೊನೆಯಲ್ಲಿ ಶ್ರೀ ಬಿ.ವಿ. ರಾವ್ ತರಬೇತುದಾರರನ್ನು ಅಭಿನಂದಿಸಿದರು. ಅನಂತರ ನಡೆದ ಚರ್ಚೆಯಲ್ಲಿ ನಮ್ಮ ಸಮಾಜದ ಪ್ರಮುಖರಾದ ಶ್ರೀ ಇನ್ನಾ ಸತೀಶ ರಾವ್ (ಆದಾಯ ತೆರಿಗೆ ಆಯುಕ್ತರು), ಶ್ರೀ ಭಾಗ್ಯಚಂದ್ರ ರಾವ್ (ಬಿ.ಸಿ. ರಾವ್, ಆಡಳಿತ ನಿರ್ದೇಶಕರು, ಕೆನ್ನಾ ಮೆಟಲ್), ಶ್ರೀ ಉದಯ ರಾವ್ ಮಣಿಕಳ, ಗ್ರೂಪ್ ಸೇಲ್ಸ್ ಮ್ಯಾನೇಜರ್, ಎಕ್ಸೈಡ್ ಲೈಫ್ ಇನ್ಶೂರೆನ್ಸ್) ಹಾಗೂ ಶ್ರೀ ಪಿ. ಸುಭಾಶ್ ರಾವ್ (ಹೆಡ್, ಆರ್. ಏಂಡ್ ಡಿ, ಸಾಸ್ಕೆನ್ ಟೆಕ್ನೊಲೊಜಿ) ಭಾಗವಹಿಸಿ ತಮ್ಮ ಕಾರ್ಯಕ್ಷೇತ್ರದ ಮಾಹಿತಿ ಹಾಗೂ ಬದಲಾವಣೆಗಳು, ಆ ಕ್ಷೇತ್ರಗಳನ್ನು ಸೇರಲು ಬೇಕಾದ ಅರ್ಹತೆಯ ಅಂಶಗಳು, ಈ ಕಾರ್ಯಕ್ಷೇತ್ರಗಳ ಬಗ್ಗೆ ಇರುವ ತಪ್ಪು ಗ್ರಹಿಕೆಗಳು, ಉದ್ಯೋಗಾಸಕ್ತರು ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆಗಳು, ದಕ್ಷ ಹಾಗೂ ಯಶಸ್ವೀ ಉದ್ಯೋಗಿಗಳಾಗಲು ಬೇಕಾದ ಕೌಶಲ್ಯಗಳು ಮುಂತಾದವುಗಳ ಬಗ್ಗೆ ಪರಿಣಾಮಕಾರಿಯಾಗಿ ವಿವರಿಸಿದರು ಹಾಗೂ ಶಿಬಿರಾರ್ಥಿಗಳ ಸಂದೇಹಗಳನ್ನು ನಿವಾರಿಸಿದರು. ಈ ಸಂದರ್ಭದಲ್ಲಿ ಅಣಕು ಸಂದರ್ಶನ ಕಾರ್ಯಕ್ರಮವನ್ನು ನಡೆಸಿ ಶಿಬಿರಾರ್ಥಿಗಳಿಗೆ ಸಂದರ್ಶನವನ್ನು ಪರಿಣಾಮಕಾರಿಯಾಗಿ ಎದುರಿಸುವ ಬಗ್ಗೆ ತರಬೇತಿ ನೀಡಲಾಯಿತು. ಕೊನೆಯಲ್ಲಿ ಸಂಘದ ಮಾಜಿ ಅಧ್ಯಕ್ಷ ಶ್ರೀ ಬಿ. ಶರತ್ ಕುಮಾರ್ ಅವರು ಚರ್ಚೆ ನಡೆಸಿಕೊಟ್ಟ ಗಣ್ಯರನ್ನು ಅಭಿನಂದಿಸಿ ಈ ರೀತಿಯ ಕಾರ್ಯಕ್ರಮಗಳು ವ್ಯಕ್ತಿತ್ವವನ್ನು ರೂಪಿಸುವಲ್ಲಿ ಯಾವ ರೀತಿ ಸಹಕಾರಿಯಾಗುತ್ತದೆ ಎಂಬುದನ್ನು ವಿವರಿಸಿದರು. ಶಿಬಿರಾರ್ಥಿಗಳು ತಮ್ಮ ಅನಿಸಿಕೆ ಹಂಚಿಕೊಂಡು ಈ ರೀತಿಯ ವಿಶೇಷ ಕಾರ್ಯಕ್ರಮ ನಡೆಸಿಕೊಟ್ಟು ಸದವಕಾಶ ಕಲ್ಪಿಸಿದ ಉದ್ಯೋಗ ಸಮಿತಿಗೆ ಹಾಗೂ ಸಭೆಗೆ ಕೃತಜ್ಞತೆ ಸಲ್ಲಿಸಿದರು. ಉದ್ಯೋಗ ಸಮಿತಿಯ ಶ್ರೀ ಕೃಷ್ಣಕುಮಾರ್ ವಂದನಾರ್ಪಣೆಗೈದರು. ಈ ಸಂದರ್ಭದಲ್ಲಿ ವಿವಿಧ ಕಂಪೆನಿಗಳಲ್ಲಿರುವ ಹಲವಾರು ಉದ್ಯೋಗಾವಕಾಶಗಳ ಮಾಹಿತಿಯನ್ನೂ ಹಂಚಿಕೊಳ್ಳಲಾಯಿತು. ಶ್ರೀ ಸಂತೋಷ್ ಕಡಬ ಕಾರ್ಯಕ್ರಮ ನಿರೂಪಿಸಿದರು. ಭೋಜನದೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು. ಕಾರ್ಯಕ್ರಮದ ಯಶಸ್ಸಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೆ ಉದ್ಯೋಗ ಸಮಿತಿಯ ಕೃತಜ್ಞತೆಗಳು.

ವರದಿ : ***ಸರಿತಾ ಸಂತೋಷ್ ರಾವ್***


The RIGHT Place for the Customer
RAJESH POWER PRESS
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 322386
E-mail : msraghunathrao@hotmail.com

ಪತ್ರಿಕೆಗೆ ಶುಭ ಬಯಸುವ–

ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
ಪ್ರಮೋದ್ ಟವರ್ಸ್, ಮಂಗಳೂರು

*Manish Rao U.*
Tel : (O) 2223301
Mobile : 9448726499 / 8884284939
NAVA COMPUTER

*Dealers in : Computers Hardware and Peripherals*
*Computer Sales & Services*
*Alvares Centre, N.H. 17, Nanthoor, Mangalore - 575 005*

ಪತ್ರಿಕೆಗೆ ಶುಭ ಬಯಸುವ–

ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು


PRAMOD AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

# ಅಪಾರ ಕೀರ್ತಿ ಗಳಿಸಿ...



ನೆಟ್ಲಮುಂಡಾಜೆ ಶ್ರೀ ಸುರೇಶ ಮತ್ತು ಶ್ರೀಮತಿ ವಿಜಯ ಇವರ ಪುತ್ರಿ **ಶ್ರದ್ಧಾ ಎನ್. ಎಮ್.** 2014ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 607 (97.12%) ಅಂಕಗಳನ್ನು ಗಳಿಸಿರುತ್ತಾಳೆ. ಅಲ್ಲದೆ ಈಕೆ ಕರ್ನಾಟಕ ಶಾಸ್ತ್ರೀಯ ಸಂಗೀತದ ಜೂನಿಯರ್ ಪರೀಕ್ಷೆಯಲ್ಲಿ 92% ಹಾಗೂ ಚಿತ್ರಕಲೆಯ ಲೋವರ್ ಮತ್ತು ಹೈಯರ್ ಗ್ರೇಡ್ ಪರೀಕ್ಷೆಗಳನ್ನು ಅತೀ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಯಾಗಿರುತ್ತಾಳೆ.

* * * * *



ದೇರೆಬೈಲ್ ಕೊಂಚಾಡಿ ನಿವಾಸಿ ಶ್ರೀಧರ್ ರಾವ್ ಮತ್ತು ಶ್ರೀಮತಿ ಹರಿಣಾಕ್ಷಿಯವರ ಸುಪುತ್ರಿ **ಕು। ರೂಪಾಶ್ರೀ** ಈ ಬಾರಿಯ ದ್ವಿತೀಯ ಪಿ.ಯು.ಸಿ. ಪರೀಕ್ಷೆ ಯಲ್ಲಿ ಶೇಕಡಾ 90 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಮಂಗಳೂರಿನ ಕೆನರಾ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ.

* * * * *

### ಜ್ಞಾನಶಕ್ತಿ ಪತ್ರಿಕೆಗೆ "ಪೋಷಕ"ರಾಗಿ ಸಹಕರಿಸುತ್ತಿರುವ ಶ್ರೀಯುತ ಯು. ಎಸ್. ಸದಾಶಿವ ರಾಯರ ಪರಿಚಯ



ಬಿ. ಕಾಂ. ವ್ಯಾಸಂಗದ ಬಳಿಕ 1970ರಲ್ಲಿ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಉದ್ಯೋಗವನ್ನು ಪಡೆದು, 1974ರಲ್ಲಿ ಆಫೀಸರರಾಗಿ ಬಡ್ತಿ ಪಡೆದು, ಕರ್ನಾಟಕ, ಗುಜರಾತ್ ಮತ್ತು ರಾಜಸ್ಥಾನದ ಹಲವಾರು ಶಾಖೆಗಳಲ್ಲಿ ಕರ್ತವ್ಯ ನಿಭಾಯಿಸಿ ಸೀನಿಯರ್ ಮೇನೇಜರರಾಗಿ 60ನೇ ಪ್ರಾಯದಲ್ಲಿ ನಿವೃತ್ತಿ ಯಾಗಿದ್ದಾರೆ.

ಅಣ್ಣ ಯು. ಎಸ್. ಗೋಪಾಲಕೃಷ್ಣರಾಯರ ಜೊತೆಯಲ್ಲಿ ಉಚ್ಚಿಲ ಕುಟುಂಬದ ವಂಶವೃಕ್ಷದ ರಚನೆ ಯಲ್ಲಿ ಪೂರ್ವಜರ ಅಧ್ಯಯನದಲ್ಲಿ ಕಂಡುಬಂದ 7ನೇ ತಲೆಮಾರಿನಲ್ಲಿ ಕುಟುಂಬದ ಎರಡು ಕವಲುಗಳು ಸಾಂತೂರು ಮತ್ತು ಕಿಗ್ಗದಲ್ಲಿ ನೆಲೆಸಿದ್ದು, ದೃಢಪಡಿಸಿ ಕೊಂಡು ಆ ಕುಟುಂಬದ ಸಹಯೋಗದೊಂದಿಗೆ ಮೂರು ಕುಟುಂಬದವರು ಕೂಡಿಕೊಂಡು ಒಂದೇ ಪುಸ್ತಕದಲ್ಲಿ "ಉಚ್ಚಿಲ ಸಾಂತೂರು ಮತ್ತು ಕಿಗ್ಗ ಕುಟುಂಬ" ನಡೆದು ಬಂದ ದಾರಿ ಶೀರ್ಷಿಕೆಯಲ್ಲಿ 2012ರಲ್ಲಿ ಬಿಡುಗಡೆ ಮಾಡಿದ್ದಾರೆ.

# ಕಡಬ ಕುಂಭಾಟ್ ಕುಟುಂಬದ ಧಾರ್ಮಿಕ ಕಾರ್ಯಕ್ರಮಗಳು

ಕಡಬ ಕುಂಭಾಟ್ ಕುಟುಂಬದಲ್ಲಿ ಹಿರಿಯರಿಂದ ಬಳುವಳಿಯಾಗಿ ಬಂದ ಹಾಗೂ ಪ್ರಸ್ತುತ ವರ್ಷಂಪ್ರತಿ ನಡೆಯುವ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸೆಪ್ಟೆಂಬರ ತಿಂಗಳ ದಿನಾಂಕ 07ರಿಂದ 10ರ ತನಕ ಕಡಬದ ಮಧುವನ ಮನೆಯಲ್ಲಿ ಊರ ಹಾಗೂ ಪರವೂರಿನ ಕುಂಭಾಟ್ ಕುಟುಂಬದ ಸದಸ್ಯರು ಹಾಗೂ ಬಂಧು ಬಾಂಧವರ ಉತ್ಸಾಹದ ಭಾಗವಹಿಸುವಿಕೆಯೊಂದಿಗೆ ಭಕ್ತಿ ನಿಷ್ಠೆಯಿಂದ ಜರುಗಿದವು. ದಿನಾಂಕ 7ರಂದು ರಾತ್ರಿ ದುರ್ಗಾ ನಮಸ್ಕಾರ ಪೂಜೆಯೊಂದಿಗೆ ಆರಂಭವಾದ ಕಾರ್ಯಕ್ರಮಗಳು ಮರುದಿನ ದಿ। ಕುಂಭಾಟ್ ಅನಂತ ರಾಯರು ಆಚರಿಸಿ ಕೊಂಡು ಬಂದು ಈಗ 53ನೇ ವರುಷದ ಹೊಸ್ತಿಲಲ್ಲಿರುವ ಶ್ರೀಮದನಂತ ವ್ರತ (ನೋಂಪು)ನೊಂದಿಗೆ ಮುಂದು ವರಿಯಿತು. ಕುಂಭಾಟ್ ಜ್ಞಾನೇಶ್‌ರವರ ನೇತೃತ್ವದಲ್ಲಿ ವಿಜೃಂಭಣೆಯೊಂದಿಗೆ ನಡೆದ ಮಂಡಲ ಪೂಜೆ, ಕಲಶ ಪ್ರತಿಷ್ಠೆ, ಕಲ್ಪೋಕ್ತ ಪೂಜೆ ಮುಂತಾದ ಧಾರ್ಮಿಕ ಕಾರ್ಯಕ್ರಮಗಳನ್ನು ಕುಲಪುರೋಹಿತ ಶ್ರೀ ವೇ. ಮೂ. ಬಟ್ರಪಾಡಿ ಸೂರ್ಯನಾರಾಯಣ ಭಟ್ ಹಾಗೂ ಇತರ ಪುರೋಹಿತ ವರ್ಗದವರು ನಡೆಸಿಕೊಟ್ಟರು. ಮುಂಜಾನೆ ಕಡಬದ ಶ್ರೀ ಮಹಾಗಣಪತಿ ದೇವರ ಸಾನಿಧ್ಯದಲ್ಲಿ ಗಣಪತಿ ಹವನ ಹಾಗೂ ಇತರ ಸೇವಾ ಕೈಂಕರ್ಯಗಳನ್ನು ನಡೆಸಲಾಯಿತು. ಶ್ರೀಮದನಂತ ವ್ರತದ ಸಂದರ್ಭದಲ್ಲಿ ದಿ. ಅನಂತರಾಯರ ನೆನಪಿಗೆ ಕೊಡಲ್ಪಡುವ ವಿದ್ಯಾರ್ಥಿ ವೇತನಗಳ ಜೊತೆಗೆ ಸಮಾಜದ ಅನಾಥರಿಗೆ, ಅಶಕ್ತರಿಗೆ, ಬಡವರಿಗೆ ಸಹಾಯಹಸ್ತ ಚಾಚಿ 'ದಾನ' ನೀಡಲಾಯಿತು ಹಾಗೂ ಈ ಸಂದರ್ಭದಲ್ಲಿ ದಾನದ ಮಹತ್ವದ ಬಗ್ಗೆ ಬೆಂಗಳೂರಿನ ಆಚಾರ್ಯ ಶ್ರೀ ವೇ. ಮೂ. ವಸಂತ ಭಟ್ ಅವರ ಉಪನ್ಯಾಸ ನಡೆಯಿತು. ಜೀವನದಲ್ಲಿ ಸತ್ಕಾಲ ದಲ್ಲಿ ಸದ್ಭಾವನೆಯಿಂದ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕೊಡುವ ದಾನವು ಮಹಾ ಶ್ರೇಷ್ಠ ಮತ್ತು ಇದು ಜೀವನದಲ್ಲಿ ಸಾಕ್ಷಾತ್ಕಾರ ಪಡೆಯಲು ಲಭ್ಯವಿರುವ ಸರಳ ದಾರಿ ಎಂಬ ವಿಷಯವನ್ನು ಮಹಾಭಾರತದಲ್ಲಿ ಕರ್ಣನು ತನ್ನ ಕರ್ಣಕುಂಡಲವನ್ನು ದಾನ ನೀಡುವ ಸನ್ನಿವೇಶದೊಂದಿಗೆ ಸರಳವಾಗಿ, ಮನೋಜ್ಞವಾಗಿ ವರ್ಣಿಸಿದರು. ಮುಖ್ಯ ಅತಿಥಿಯಾಗಿದ್ದ ಶ್ರೀ ವೇ. ಮೂ. ಬಟ್ರಪಾಡಿ ಸೂರ್ಯನಾರಾಯಣ ಭಟ್ ಮಾತನಾಡುತ್ತಾ ದಾನ ಮಾಡಬೇಕೆಂಬ ನಿರ್ಧಾರ ಅಚಲವಾಗಿರಲಿ ಮತ್ತು ಅದು ಚಂಚಲ ಮನಸ್ಸಿನಿಂದಾಗಿ ಬದಲಾಗದಿರಲಿ ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ಬೆಂಗಳೂರಿನ ಆಧ್ಯಾತ್ಮ ಗುರು ಶ್ರೀ ಗುರು ಭಗವಾನ್ ಗಂಗಾಧರ ಗುರೂಜಿ ಅವರು ಉಪಸ್ಥಿತರಿದ್ದು "ಒಳ್ಳೆಯ ಕೆಲಸಗಳನ್ನು ಒಳ್ಳೆಯ



ಮನಸ್ಸಿನಿಂದ ಮಾಡಿದಾಗ ಎಲ್ಲರಿಗೂ ಒಳ್ಳೆಯದಾಗು ವುದು" ಎಂಬ ಸಂದೇಶ ನೀಡಿದರು. ಫಲಾನುಭವಿಗಳ ಪರವಾಗಿ ಕನ್ಯಾನದ ಅನಾಥಶ್ರಮದ ಸಂಯೋಜಕ ಶ್ರೀ ಈಶ್ವರ ಭಟ್ ಹಾಗೂ ಮಂಗಳೂರಿನ ಮಕ್ಕಳ ಸಹಾಯವಾಣಿ ಕೇಂದ್ರದ ಅಧಿಕಾರಿಯವರು ಮಾತನಾಡಿ ಕುಂಭಾಟ್ ಕುಟುಂಬವು ನಿಸ್ವಾರ್ಥ ಮನೋಭಾವನೆ ಯಿಂದ ಮಾಡುತ್ತಿರುವ ಈ ವಿಶೇಷ ಕಾರ್ಯಕ್ರಮವನ್ನು ಮೆಚ್ಚಿ ಕೊಂಡಾಡಿದರು. ಕುಟುಂಬದ ಹಿರಿಯರಾದ ಶ್ರೀ ಸೋಮಶೇಖರ ರಾವ್ ಸಭೆಯ ಅಧ್ಯಕ್ಷತೆ ವಹಿಸಿದ್ದರು ಹಾಗೂ ಕಡಬ ಶ್ರೀ ಗೋಪಾಲ ರಾವ್ ಉಪಸ್ಥಿತರಿದ್ದರು. ಭೋಜನದ ನಂತರ ನಡೆದ ಕಾರ್ಯಕ್ರಮದಲ್ಲಿ ಆಧ್ಯಾತ್ಮ ಗುರು ಶ್ರೀ ಗುರು ಭಗವಾನ್ ಗಂಗಾಧರ ಗುರೂಜಿ ಯವರು "ಪರಬ್ರಹ್ಮ ವಿಜ್ಞಾನದ ಪರಿಚಯ" ಶಿಬಿರ ನಡೆಸಿ ಸುಮಾರು 70ಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದ ಸಮಾಜದ ಬಾಂಧವರಿಗೆ ಪ್ರಣವೋಪಾಸನೆಯ ದೀಕ್ಷೆ ನೀಡಿದರು. ಆ ದಿನ ಸಾಯಂಕಾಲ ಕಡಬದ ಶ್ರೀ ದುರ್ಗಾಂಬಿಕ ಭಜನಾ ಮಂಡಳಿಯ ಸದಸ್ಯರಿಂದ ಭಕ್ತಿಪೂರ್ವಕ ಭಜನಾ ಕಾರ್ಯಕ್ರಮ ನೆರೆದವರನ್ನು ಭಕ್ತಿಗಡಲಲ್ಲಿ ತೇಲಿಸಿದರೆ ತಡ ರಾತ್ರಿಯ ತನಕ ನಡೆದ ಸುರತ್ಕಲ್‌ನ ಶ್ರೀ ಗುರು ರಾಘವೇಂದ್ರ ಸಂಚಾರಿ ಯಕ್ಷಗಾನ ತಂಡ ಹಾಗೂ ಊರ ಕಲಾವಿದರಿಂದ "ಸುದರ್ಶನ ವಿಜಯ" ಎಂಬ ಪೌರಾಣಿಕ ತಾಳಮದ್ದಳೆ ಕಾರ್ಯಕ್ರಮವು ಎಲ್ಲರನ್ನೂ ರಂಜಿಸಿತು. ದಿನಾಂಕ 09ರಂದು ಉದ್ಯಾಪನಾ ಪ್ರಧಾನ ಹೋಮ ಹವನಗಳೊಂದಿಗೆ ಶ್ರೀಮದನಂತ ವ್ರತದ ಉದ್ಯಾಪನಾ ಕಾರ್ಯಕ್ರಮ ಸಂಪನ್ನಗೊಂಡಿತು.

ಶ್ರೀ ಸಂತೋಷ್ ಕಡಬ ಎಲ್ಲಾ ಕಾರ್ಯಕ್ರಮಗಳನ್ನು ನಿರೂಪಿಸಿದರು. ದಿ. 10ರಂದು ಕುಟುಂಬದ ಎಲ್ಲ ಕವಲುಗಳ ಪ್ರಮುಖರ ಭಾಗವಹಿಸುವಿಕೆಯೊಂದಿಗೆ "ಮಹಾಲಯ ಕಾರ್ಯಕ್ರಮ" ಶ್ರೀಕಂಠ ಸ್ವಾಮಿ ದೇವಳದಲ್ಲಿ ನೆರವೇರಿಸಿ ಸ್ವರ್ಗಸ್ಥರಾದ ಕುಟುಂಬದ ಎಲ್ಲಾ ಪಿತೃವರ್ಗಕ್ಕೆ ಗೌರವವನ್ನು ಸಲ್ಲಿಸಲಾಯಿತು.

*ವರದಿ : **ಸಂತೋಷ್ ಕಡಬ,** ಬೆಂಗಳೂರು*



**ಹೆಬ್ಬಾರ್ ಎಂಟರ್‌ಪ್ರೈಸಸ್**

**ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101**

*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್‌ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*

ಫೋನ್ : 2531493 (O), 2530851 (R), ಮೊಬೈಲ್ : 9448437893

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**



**ಹೋಮಿಯೋಪತಿ ಹಾಗೂ**
**ಡಯಟ್ ಸಲಹೆ ಔಷಧಿಗಳಿಗಾಗಿ ಸಂದರ್ಶಿಸಿ.**
**ಡಾ. ಸುಶೀಲ ರಾವ್,** ಬಿ.ಎಚ್.ಎಮ್.ಎಸ್.
**ಹೋಮಿಯೋಪತಿ ಕನ್ಸಲ್ಟೆಂಟ್ ಆ್ಯಂಡ್ ಡಯಟಿಶಿಯನ್**
**ಸ್ಪರ್ಶ ಮೆಡಿಕಲ್ ಸೆಂಟರ್**
**ಬೆಂದೂರ್‌ವೆಲ್ ಸರ್ಕಲ್, ಮಂಗಳೂರು - 2**
ದೂರವಾಣಿ : 0824-4276666 ಮೊಬೈಲ್ : 9844063805

**Prakash Rao** **Mob : 8453679734, 9986071684**



**KRISHNA ELECTRONICS**

*Dealers in :*

***Electronic Spares & T.V., VCD, DVD etc Service Centre, Car Cds, Speaker, Sub Woofers, USB Players C.C. Camers***

**Opp. Service Bus Stand, Rao & Rao Circle, City Towers**
**MANGALORE - 575 003**




# ಲ್ಯಾಂಡ್ ಟ್ರೇಡ್ಸ್‌ನ ಸಾಲಿಟೇರ್‌ಗೆ ಶಿಲಾನ್ಯಾಸ

**ಮಂಗಳೂರು, ಸೆ. 29 :** ಅಪಾರ ಉದ್ಯೋಗಾವಕಾಶ ಸೃಷ್ಟಿಸುವ ಮತ್ತು ಕ್ಷಿಪ್ರ ಬೆಳವಣಿಗೆಗೆ ಕಾರಣವಾದ ಉದ್ಯಮವು **'ನಿರ್ಮಾಣ ಉದ್ಯಮ ಕ್ಷೇತ್ರ'** ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಬಿ. ರಮಾನಾಥ ರೈ ಅವರು ಅಭಿಪ್ರಾಯಪಟ್ಟರು. ಈ ನಿಟ್ಟಿನಲ್ಲಿ ಶ್ರೀ ಕೆ. ಶ್ರೀನಾಥ್ ಹೆಬ್ಬಾರ್ ಪ್ರವರ್ತನೆಯ ಲ್ಯಾಂಡ್ ಟ್ರೇಡ್ಸ್ ಸಂಸ್ಥೆ ನಿರ್ಣಾಯಕ ಕೊಡುಗೆಗಳನ್ನು ನೀಡುತ್ತಿದೆ ಎಂದು ಶ್ಲಾಘಿಸಿದರು.

ಸೋಮವಾರ ಲ್ಯಾಂಡ್ ಟ್ರೇಡ್ಸ್‌ನ ಅತ್ಯಂತ ಪ್ರತಿಷ್ಠೆಯ ಮತ್ತು ವಿಶಿಷ್ಟ ವಾಸ್ತುವಿನ್ಯಾಸದ **'ಸಾಲಿಟೇರ್'** ವಸತಿ ಸಮುಚ್ಚಯದ (ಹ್ಯಾಟ್‌ಹಿಲ್ ಮಂಗಳೂರು) ಶಂಕುಸ್ಥಾಪನೆಯ ಸಂದರ್ಭದಲ್ಲಿ ಕಟ್ಟಡದ ಪ್ರತಿಕೃತಿಯನ್ನು ಅನಾವರಣಗೊಳಿಸಿದರು. ಈ ಸಮುಚ್ಚಯ ತ್ವರಿತಗತಿಯಲ್ಲಿ ನಿರ್ಮಾಣವಾಗಿ ಕರಾವಳಿಯ ನಿರ್ಮಾಣ ಉದ್ಯಮ ಕ್ಷೇತ್ರವು ವಾಸ್ತು ವೈಶಿಷ್ಟ್ಯದ ದಾಖಲೆಯಾಗಲಿ ಎಂದು ಹಾರೈಸಿದರು.

ಸಾಲಿಟೇರ್ ಯೋಜನೆಯ ಮಾಹಿತಿ ಪತ್ರವನ್ನು ಕರ್ನಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಪಿ. ಜಯರಾಮ ಭಟ್ ಬಿಡುಗಡೆಗೊಳಿಸಿದರು. ಸಾಲಿಟೇರ್ ಕಟ್ಟಡ ಅತ್ಯಾಕರ್ಷಕವಾಗಿ ನಿರ್ಮಾಣವಾಗಲಿ ಎಂದು ಅವರು ಶುಭ ಕೋರಿದರು.

ಯೇನಪೋಯ ವಿ.ವಿ.ಯ ಕುಲಪತಿ ಅಲ್‌ಹಾಜ್ ಯೇನಪೋಯ ಅಬ್ದುಲ್ಲ ಕುಂಞಿ ಶಿಲಾನ್ಯಾಸ ಗೈದರು. ಮೇಯರ್ ಮಹಾಬಲ ಮಾರ್ಲ ಅಧ್ಯಕ್ಷತೆ ವಹಿಸಿದ್ದರು. ನಿರ್ಮಾಣ ಸಂಸ್ಥೆಗಳು ಮೂಲ ಸೌಕರ್ಯಗಳ ಸಹಿತ ನಗರದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಲೆಂದು ಹಾರೈಸಿದರು.

ಮುಖ್ಯ ಅತಿಥಿಯಾಗಿದ್ದ ಮಾಜಿ ಸಚಿವ ಜೆ. ಕೃಷ್ಣ ಪಾಲೆಮಾರ್ ಅವರು ಶ್ರೀನಾಥ್‌ರ ಲ್ಯಾಂಡ್ ಟ್ರೇಡ್ಸ್ ಹೊಸ ಹೊಸ ವಿನ್ಯಾಸದ ಪರಂಪರೆ ಹೊಂದಿದೆ ಎಂದರು.

ಮಾಜಿ ಮೇಯರ್ ಶ್ರೀ ಎಂ. ಶಶಿಧರ ಹೆಗ್ಡೆ ಅವರು ಲ್ಯಾಂಡ್ ಟ್ರೇಡ್ಸ್‌ನ ಎಲ್ಲ ಯೋಜನೆಗಳು ಶ್ಲಾಘನೀಯ. ಕಳೆದ 23 ವರ್ಷಗಳಿಂದ ಶ್ರೀ ಶ್ರೀನಾಥ್ ಅವರು ರಿಯಲ್ ಎಸ್ಟೇಟ್ ಡೆವಲಪರ್ ಆಗಿ ಅಪಾರ ಮನ್ನಣೆಗೆ ಪಾತ್ರರಾಗಿದ್ದಾರೆಂದು ಅಭಿನಂದಿಸಿದರು. ಕಾರ್ಪೊರೇಟರ್ ಶ್ರೀ ರಜನೀಶ್ ಅವರು ಯೋಜನೆಯು ಕರಾವಳಿಗೆ ಅಪೂರ್ವ ಕೊಡುಗೆಯಾಗಲಿದೆ ಎಂದರು.

ಪ್ರವರ್ತಕರಾದ ಕೆ. ಶ್ರೀನಾಥ್ ಹೆಬ್ಬಾರ್ ಸ್ವಾಗತಿಸಿದರು. 23 ವರ್ಷಗಳಿಂದ ಗ್ರಾಹಕರ ಪರವಾದ ಬದ್ಧತೆಯಿಂದ ಲ್ಯಾಂಡ್ ಟ್ರೇಡ್ಸ್ ಯಶಸ್ಸು ಗಳಿಸಲು ಸಾಧ್ಯವಾಗಿದೆ. ಇದೇ ಸೇವಾಬದ್ಧತೆ ಸಂಸ್ಥೆಯ ಆದರ್ಶವಾಗಿದೆ. ಬೆಂಬಲಿಸುತ್ತಿರುವ ಸರ್ವರಿಗೂ ಕೃತಜ್ಞ ಎಂದರು. ಸಾಲಿಟೇರ್ ಸಮುಚ್ಚಯ 32 ಅಂತಸ್ತುಗಳಲ್ಲಿ 144 ಅಪಾರ್ಟ್‌ಮೆಂಟ್ ಹೊಂದಲಿದೆ.

ಶ್ರೀ ಶಾಂತಿರಾಜ್ ಜೈನ್, ಶ್ರೀ ಪೀಟರ್, ಶ್ರೀ ಲ್ಯಾನ್ಸಿ ಡಿ'ಸೋಜಾ, ಶ್ರೀ ಬಾಬಾ ಅಲಂಕಾರ್ ಅವರನ್ನು ಸನ್ಮಾನಿಸಲಾಯಿತು. ಶ್ರೀ ಕ್ರಿಸ್ಟಿನಾ ವಂದಿಸಿದರು. ಶ್ರೀ ಮನೋಹರ ಪ್ರಸಾದ್ ಕಾರ್ಯಕ್ರಮ ನಿರ್ವಹಿಸಿದರು.

**ಆದರ್ಶಯುತ ಶ್ರೀನಾಥ್ : ಜಯರಾಮ ಭಟ್ ಶ್ಲಾಘನೆ :** ಪರಿಪೂರ್ಣತೆ, ಕಲಾಭಿಜ್ಞತೆ, ಸಮಯಪಾಲನೆ, ಸೇವಾಧರ್ಮ, ವಿಶ್ವಾಸಾರ್ಹತೆಗಳು ಶ್ರೀನಾಥ್ ಹೆಬ್ಬಾರ್ ಅವರಲ್ಲಿ ತಾನು ಕಂಡ ಆದರ್ಶಗುಣಗಳೆಂದು ಶ್ಲಾಘಿಸಿದರು ಪಿ. ಜಯರಾಮ ಭಟ್. ಈ ಗುಣಗಳಿಂದಾಗಿ ಲ್ಯಾಂಡ್ ಟ್ರೇಡ್ಸ್ ಸಂಸ್ಥೆಯು ವಿಶ್ವಾಸಾರ್ಹವಾದ ಬಿಲ್ಡರ್ಸ್ ಆ್ಯಂಡ್ ಡೆವಲಪರ್ಸ್ ಸಂಸ್ಥೆಯಾಗಿದೆ. ಅವರ ಹೊಸ ಯೋಜನೆ ಘೋಷಣೆಯಾದ ತತ್‌ಕ್ಷಣ ಬುಕ್ಕಿಂಗ್ ಆರಂಭವಾಗುವುದು ಗ್ರಾಹಕರು ಅವರ ಮೇಲೆ ಹೊಂದಿರುವ ವಿಶ್ವಾಸಕ್ಕೆ ದ್ಯೋತಕ ಎಂದರು.





Prop. : *Pradeep V. Rao* M. : 9880093799 9844541917

VYBHAV ENTERPRISES

All Mobile Recharges & DTH Recharges

BALMATTA REAL ESTATE

**Contact for Sites, Houses, Rental Houses & Flats and all Documentation**

**Ground Floor, Dwaraka Complex**
**Arya Samaja Road, Balmatta, Mangalore - 575 003**
E-mail : pradeepvrao55@gmail.com

*Sri Hari Adyapady*
*Proprietor*

Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**

**2nd Floor, Ozanam Complex, Church Building**
**Main Road, BAJPE, MANGALORE**



***We undertake all types of Electrical, Plumbing and Sanitary works***

**PREETHIKA AUTOMOBILES**

✆ 2493633 9845851573

*Wholesale & Retail Dealers in :*

***2 & 3 WHEELERS, SPARES & ACCESSORIES***

**KARANGALPADY, MANGALORE - 575 003**

***Dealers in :***

**Minda Switches, M. K. Products, Swiss Auto Products, Power Coils**

ಎಲ್ಐಸಿ ಪಾಲಿಸಿಗಳ ಪುನರುಜ್ಜೀವನ (Lapsed Policy Revival) ಕ್ಲೈಮ್, ಸರೆಂಡರ್, ಲೋನ್, ನಾಮಿನೇಶನ್ ಇತ್ಯಾದಿ ಸರ್ವೀಸ್‌ಗಳನ್ನು ನೀಡಲಾಗುವುದು ಹಾಗೂ ಇಚ್ಛೆಪಟ್ಟಲ್ಲಿ ಅವರಿಗೆ ಹೊಂದಿಕೆಯಾಗುವಂತಹ ಹೊಸ ಪಾಲಿಸಿಗಳನ್ನು ಮಾಡಿಕೊಡಲಾಗುವುದು. ಅಲ್ಲದೆ ಮೋಟಾರ್ ವೆಹಿಕಲ್ ಇನ್ಶೂರೆನ್ಸ್, ಹೆಲ್ತ್ ಇನ್ಶೂರೆನ್ಸ್, ಪಾನ್ ಕಾರ್ಡ್ ಹಾಗೂ ಮ್ಯೂಚುವಲ್ ಫಂಡ್ ಇನ್‌ವೆಸ್ಟ್‌ಮೆಂಟ್ ಮಾಡಿಕೊಡಲಾಗುವುದು.

LIC

***ಸಂಪರ್ಕಿಸಿರಿ :***

**ಪಿ. ರಾಜೇಂದ್ರ ರಾವ್,** ಬಿ.ಎಸ್ಸಿ.

**ಕುಂಜತ್ತಬೈಲ್, ಮಂಗಳೂರು, ಮೊ. : 9242214842**

ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಸುರತ್ಕಲ್, ಮಂಗಳೂರು**

Phone : 0824 - 2440110, 2213946

**VISHRAM MOTORS (P.) LTD.**

**No. 4, Kodialbail Church Building**
**K. S. Rao Road, MANGALORE - 575 003**

***Authorised Dealers for :***

**Vijai Super GP 150 &**
**Vikram 3 Wheelers (Petrol & Diesel)**



ಪತ್ರಿಕೆಗೆ ಶುಭ ಬಯಸುವ–



**ಶ್ರೀ ಶಾಂತರಾಮ್ ರಾವ್ ಕೆ.**
**ಶ್ರೀಮತಿ ರಮ್ಯ ಎಸ್. ರಾವ್**
**ಶರಣ್ಯ ಎಸ್. ರಾವ್**

# ಶ್ರೀ ಸುಬ್ರಹ್ಮಣ್ಯ ಸಭಾದ ಭಜನಾ ಕಾರ್ಯಕ್ರಮ




ನವರಾತ್ರಿಯ ಪ್ರಥಮ ದಿನದಂದು ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದಿಂದ ಭಜನಾ ಸೇವೆ ನಡೆಯಿತು. ಶ್ರೀಮತಿ ಸುಶೀಲಮ್ಮ, ಶ್ರೀಮತಿ ವೇದಾವತಿ, ಶ್ರೀ ಹರಿನಾರಾಯಣ ರಾವ್ ಭಕ್ತಿಪೂರ್ವಕವಾಗಿ ಹಾಡಿದರೆ ಇತರ ಸದಸ್ಯರು ಶ್ರದ್ಧಾಪೂರ್ವಕವಾಗಿ ಹಾಡಿ ಅವರನ್ನು ಅನುಸರಿಸಿದರು. ಶ್ರೀ ನಾಗರಾಜ್ ಶರ್ಮ, ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀ ರಘುವೀರ್ ಪೆರ್ಡೂರ್, ಶ್ರೀಮತಿ ಅರುಣಾ, ಶ್ರೀಮತಿ ರೇಖಾ, ಶ್ರೀಮತಿ ಶಾರದಾ, ಪುಟಾಣಿ ತನುಶ್ರೀ ಭಜನೆಯಲ್ಲಿ ಭಾಗವಹಿಸಿದರೆ ಶ್ರೀ ಕಾರ್ತಿಕ್ ಕುಡುಪು ಹಿಮ್ಮೇಳದಲ್ಲಿ ಸಹಕರಿಸಿದರು. ಶ್ರೀ ಪ್ರಮೋದ್ ಕ್ಯಾದಿಗೆ, ಶ್ರೀ ಉದಯ್ ಕುಮಾರ್ ಪಿ., ಶ್ರೀ ಉದಯ ಅಡೂರ್, ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀ ಅನಿಲ್ ಕುಮಾರ್ ಬಿ.ಎಸ್., ಶ್ರೀಮತಿ ಸುಪ್ರೀತ ವ್ಯವಸ್ಥೆಯಲ್ಲಿ ಸಹಕರಿಸಿದರು.

## ಶಿವಬ್ರಾಹ್ಮಣ ಸಭಾ (ರಿ.), ಕಾಸರಗೋಡು

ರಿ.ನಂ. 287/95, ಡೋರ್ ನಂ. 24/535, ಬೇಂಕ್ ರಸ್ತೆ, ಕಾಸರಗೋಡು - 671 121

**19ನೇ ವಾರ್ಷಿಕ ಮಹಾಸಭೆ** ಮತ್ತು

**ಜಿಲ್ಲಾ ಸಮಾವೇಶ**

ಪ್ರಿಯರೇ,

ಇದೇ ಬರುವ ತಾರೀಕು 19–10–2014ನೇ ಆದಿತ್ಯವಾರ
ಬೆಳಗ್ಗೆ 8–30 ಗಂಟೆಗೆ ಸರಿಯಾಗಿ
ನಮ್ಮ ಸಂಘದ

**19ನೇ ವಾರ್ಷಿಕ ಮಹಾಸಭೆ ಮತ್ತು ಜಿಲ್ಲಾ ಸಮಾವೇಶವನ್ನು**

**ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಾಲಯದ ಪ್ರಾಂಗಣದಲ್ಲಿ** ಜರಗಿಸುವರೆ ನಿಶ್ಚಯಿಸಿರುತ್ತೇವೆ. ತತ್ಸಂಬಂಧ ನಡೆಯಲಿರುವ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುತ್ತೇವೆ.

**ಎ. ವಿ. ಶ್ಯಾನುಭೋಗ್**
ಗೌರವಾಧ್ಯಕ್ಷರು

**ಡಾ. ಎಂ. ಸತ್ಯನಾಥ**
ಅಧ್ಯಕ್ಷರು

**ಎ. ಮನೋಹರ**
ಕಾರ್ಯದರ್ಶಿ

**ಎಂ. ಶುಭಕರ ಶ್ಯಾನುಭೋಗ್**
ಕೋಶಾಧಿಕಾರಿ

**ಸಿ. ಯಂ. ರಾವ್ ಕಟಪಾಡಿ**
ಯಶಸ್ವಿ ವಾಸ್ತುಶಾಸ್ತ್ರಜ್ಞರು ಮತ್ತು ಜ್ಯೋತಿಷ್ಯರು



*ಶ್ರೀ ಮುರಳೀಧರ ರಾವ್*
*'ಅನುಗ್ರಹ', ಚರ್ಚ್ ರೋಡ್, ಕಟಪಾಡಿ - 574 105*
ಮೊಬೈಲ್ : 9741816166
*ತಪ್ಪದೆ ವೀಕ್ಷಿಸಿ : ಸ್ಪಂದನ ಟಿ.ವಿ. ವಾಹಿನಿಯಲ್ಲಿ 'ಈಶಾವಾಸ್ತು'*
*ಪ್ರತಿ ಭಾನುವಾರ ಪೂರ್ವಾಹ್ನ 9-00ರಿಂದ 10-00ರ ತನಕ*

**PRAVEEN KUMAR ADYAPADY**
**ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

We undertakes : Civil, Criminal, Motor Vehicles,
A.C., D.C. Cases, Land Conversion, Registration etc.

*Prop. : P. Srikanth Rao* Mobile : 9343361618

**M/s. SAMARPAN**

*HOUSE OF STATIONERY*

"Vijaya Nivas", Opp. Pio Mall
Bejai Church Road, Mangalore - 4

Prop. : *Kishore Kumar Kedige*
Ph. : 2231524
M. : 9880726325

**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

**SHARMA ENTERPRISES**
KANKANADY, MANGALORE - 575 002
Prop. :
*Chethan Sharma*
Mob. : 9844187083

# ಚಿಣ್ಣರ ಆರ್ಟ್ ಗ್ಯಾಲರಿ


**ಚಿತ್ರ 1**




**ಚಿತ್ರ 2**



ಈ ಮೇಲಿನ ಎರಡು ಚಿತ್ರಗಳಲ್ಲಿರುವ 10 ವ್ಯತ್ಯಾಸಗಳನ್ನು ಗುರುತಿಸಿ.



ಅನನ್ಯಾ ರಾವ್



ಜ್ಯೋತಿ ಕೆ., ಸುಳ್ಯ







ಸ್ಕಂದ, UKG 'A'

ಜ್ಞಾನಶಕ್ತಿ 'ಚಿಣ್ಣರ ಆರ್ಟ್ ಗ್ಯಾಲರಿ'ಗೆ 12 ವರ್ಷದ ಒಳಗಿನ ಮಕ್ಕಳು ತಾವು ರಚಿಸಿದ ರೇಖಾಚಿತ್ರ ಮತ್ತು ಪೈಂಟಿಂಗ್‌ಗಳನ್ನು ಕಳುಹಿಸಬಹುದು. ಇದರೊಂದಿಗೆ ಅವರ ಭಾವಚಿತ್ರ ಕಳುಹಿಸಿದಲ್ಲಿ ಪ್ರಕಟಿಸಲಾಗುವುದು. ಭಾವಚಿತ್ರಗಳನ್ನು ಹಿಂತಿರುಗಿಸಲಾಗುವುದಿಲ್ಲ.

**ನಮ್ಮ ವಿಳಾಸ :**
**ಅಂಚೆ ಪೆಟ್ಟಿಗೆ ನಂ. 206**
**ದರ್ಬೆ - 574 202, ಪುತ್ತೂರು, ದ. ಕ.**




## ಜ್ಞಾನ – ನುಡಿ

ನಿಮ್ಮ ಜೀವನದಲ್ಲಿ ಸೂರ್ಯ ಮರೆಯಾದನೆಂದು ನೀವು ಅತ್ತರೆ, ಹೊಳೆಯುವ ನಕ್ಷತ್ರಗಳು ಕಾಣಿಸಲು ಕಣ್ಣೀರು ಅಡ್ಡಿಯಾಗುತ್ತದೆ.

**– ರವೀಂದ್ರನಾಥ ಠಾಗೂರ್**

## ಜ್ಞಾನ – ನಗೆ

**ತಿಪ್ಪೇಶಿ :** ಚೀನಾದ ಗೋಡೆಯಲ್ಲಿ ಅಂತಹ ವಿಶೇಷತೆ ಏನಿದೆಯೆಂದು ಅದನ್ನು ಜಗತ್ತಿನ ಏಳು ಆಶ್ಚರ್ಯಗಳಲ್ಲಿ ಸೇರಿಸಿದ್ದಾರೆ?

**ಗುಂಡ :** ಚೀನಿಯರು ನಿರ್ಮಿಸಿರುವ ವಸ್ತುಗಳಲ್ಲಿ ಇದೊಂದೇ ಬಹಳ ವರ್ಷಗಳ ಕಾಲ ಬಾಳಿಕೆ ಬಂದಿರೋದು. ಬಹುಶಃ ಅದಕ್ಕೇ ಏಳು ಅದ್ಭುತಗಳಲ್ಲಿ ಸೇರಿಸಿರಬೇಕು.

## ಜ್ಞಾನ – ಗಾದೆ

ಓಳೊ ಬರ್ಪುನ ಬರ್ಸಗ್ ಮೂಳು ಕೊಡೆ ಬುಡ್ಪಾಯೆ
ಓಟೆಡ್ ಪಾಂಡಲಾ ನಾಯಿದ ಬೀಲ ಸರ್ತ ಆವಣ್
ಓಡೆ ಪೋಂಡಲಾ, ಮಗೆ ಇಲ್ಲಡೆಗೆ ಪಿರ ಬರುವೆ.

## ಜ್ಞಾನ – ವಿಸ್ಮಯ

ಪ್ಯಾರಿಸ್‌ನಲ್ಲಿ 'ಪ್ರೀತಿ ಮಾಡಿ, ಆದರೆ ಬೀಗವನ್ನು ಪ್ರೀತಿ ಮಾಡಬೇಡಿ' ಎಂಬ ಪ್ರಚಾರ ಕಾರ್ಯ ಆರಂಭವಾಗಿದೆಯಂತೆ. ಪ್ರೇಮಿಗಳು ತಮ್ಮ ಪ್ರೀತಿಯನ್ನು ಭದ್ರಪಡಿಸಲು ಅಲ್ಲಿರುವ ಸೇತುವೆಗಳಿಗೆ ಬೀಗದ ತಟ್ಟೆ ನೇತಾಡಿಸಿ ಕೀಲಿಕೈಗಳನ್ನು ನದಿಗೆ ಎಸೆಯುತ್ತಾರಂತೆ. ಕೆಲವು ಸೇತುವೆಗಳು ಬೀಗದ ತಟ್ಟೆಗಳ ಭಾರಕ್ಕೆ ಬಿರುಕುಬಿಟ್ಟು ಅಲ್ಲಿಯ ಆಡಳಿತಕ್ಕೆ ತಲೆನೋವು ತಂದಿದೆಯಂತೆ.

Please log on to : www.subramanyasabha.com For all information on Subramanya Sabha and Address of Stanika in Mangalore, Bantwal & Moodabidri

*Publisher : Sri C. S. Rao, President, Shree Subrahmanya Sabha (R.), Kodialbail, Mangalore - 3*

*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*